# ಬಾಟಲಿಯ ಗೋಡೆ

ಪ್ಲಾಸ್ಟಿಕ್ ಬಾಟಲ್‌ಗಳಿಂದ ಅಲಂಕಾರಿಕ ವಸ್ತುಗಳನ್ನು ತಯಾರಿಸುವುದನ್ನು ಕೇಳಿದ್ದೇವೆ. ಆದರೆ ಗದಗದ ರೇವಣ್ಣ ಎಂಬುವವರು ಉಪಯೋಗಿಸಿದ ನಂತರ ಕಸದ ಬುಟ್ಟಿ ಸೇರುವ ಪ್ಲಾಸ್ಟಿಕ್ ಬಾಟಲ್‌ಗಳನ್ನು ಜೋಡಿಸಿ ತಮ್ಮ ಅಡುಗೆ ಕೋಣೆಗೆ ಗೋಡೆಯೊಂದನ್ನು ನಿರ್ಮಿಸಿದ್ದಾರೆ. ಬಾಟಲಿಯ ತಳಭಾಗವನ್ನು ಕತ್ತರಿಸಿ ಒಂದರೊಳಗೊಂದರಂತೆ ಬಾಟಲಿಗಳನ್ನು ಜೋಡಿಸಲಾಗಿದೆ. ಗಾಳಿಗೆ ಬೀಳದಂತೆ ಒಳ ಮತ್ತು ಹೊರಭಾಗದಿಂದ ಸರಿಗೆಯನ್ನು ಕಟ್ಟಲಾಗಿದೆ. ಬೆಂಕಿಯ ಶಾಖ ತಾಗದಿದ್ದರೆ ಐದಾರು ವರ್ಷಗಳ ಕಾಲ ಹಾಳಾಗುವುದಿಲ್ಲವಂತೆ.

**-ಚಂದ್ರಹಾಸ ಚಾರ್ಮುಡಿ, ಬೆಳ್ತಂಗಡಿ**





# ಬೃಹತ್ ಕಣಜದ ಗೂಡು

ಪಕ್ಷಿಗಳು, ಅದರಲ್ಲೂ, ಗೀಜಗನ ಹಕ್ಕಿ ಗೂಡು ಕಟ್ಟುವ ಸೋಜಿಗ ನೋಡಿದ್ದೇವೆ. ಅದೇ ಮಾದರಿಯಲ್ಲಿ ಕಣಜದ ಇರುವೆಗಳು ಬೃಹದಾಕಾರವಾದ ಗೂಡು ಕಟ್ಟಿದ ಮಾದರಿ ಇದಾಗಿದೆ.

ಉತ್ತರಕನ್ನಡದ ಯಲ್ಲಾಪುರ ತಾಲೂಕಿನ ಕೊಡಸೆ ಬಳಿಯ ದಟ್ಟ ಕಾನನದಲ್ಲಿ ನಾಲ್ಕು ಅಡಿ ಉದ್ದದ ಈ ಕಣಜದ ಗೂಡು ಗಿಡಕ್ಕೆ ಆಧಾರವಾಗಿ ಜೋತುಬಿದ್ದಿದೆ. ಸಾವಿರಾರು ಸಂಖ್ಯೆಯಲ್ಲಿ ಇರುವ ಕಣಜದ ಹುಳುಗಳು ಏಕಕಾಲದಲ್ಲಿ ಮನುಷ್ಯನ ಮೇಲೆ ದಾಳಿ ಮಾಡಿದರೆ ಸಾವು ಖಚಿತ. ಸೆಗಣಿ, ಮಣ್ಣು ಸೇರಿದಂತೆ ತ್ಯಾಜ್ಯಗಳನ್ನು ಸೇರಿಸಿ ಪದರ, ಪದರವಾಗಿ ರಚಿಸಿದ ಈ ಕಣಜದ ಗೂಡಿನ ವಿನ್ಯಾಸ ಸೊಗಸಾಗಿದೆ.

**ಚಿತ್ರ-ಬರಹ: ದತ್ತಾತ್ರೇಯ ಭಟ್ಟ ಕಣ್ಣಿಪಾಲ, ಯಲ್ಲಾಪುರ**



# ಧ್ಯಾನಸ್ಥ ಬುದ್ಧ

ಬೆಂಗಳೂರಿನಿಂದ 35 ಕಿ.ಮೀ. ದೂರವಿರುವ ಕನಕಪುರ ರಸ್ತೆಯ ಪಿರಮಿಡ್ ವ್ಯಾಲಿಯ ಧ್ಯಾನಸ್ಥ ಬುದ್ಧನ ವಿಗ್ರಹ ಮನೋಹರವಾಗಿದೆ. ಶಾಂತಿ, ನೆಮ್ಮದಿ, ಧ್ಯಾನಕ್ಕೆ ಪ್ರಶಸ್ತ ಸ್ಥಳವಾಗಿದ್ದು, ಪಿರಮಿಡ್‌ನಲ್ಲಿ ಕುಳಿತು ಬುದ್ಧನಂತೆ ಧ್ಯಾನ ಮಾಡಿದರೆ, ಮನಕ್ಕೆ ಶಾಂತಿ ದೊರಕುವುದು ನಿಸ್ಸಂಶಯ. ಸುತ್ತಲೂ ಹಸಿರಿನಿಂದ ಕಂಗೊಳಿಸುವ ತೆಂಗು, ಹಲಸು, ಮಾವಿನ ಮರಗಳು, ಅಲ್ಲಲ್ಲಿ ಜುಳು ಜುಳು ಹರಿಯುವ ನೀರಿನ ಜಲಪಾತ, ಉದ್ಯಾನ ಕಣ್ಣಿಗೆ ಹಬ್ಬ.

**-ಶ್ರೀಧರ ರಾಯಸಂ, ಬೆಂಗಳೂರು**